**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಸಿ.ಸಿ. ನಂ. 348/2022.**

**ಸಿ ಡಬ್ಲ್ಯೂ: 7**

**ಪಿ ಡಬ್ಲ್ಯೂ: 2**

| | | |
|---|---|---|
| ಹೆಸರು | : | ಹನುಮಗೌಡ ಹೊಂಡದಗೌಡ್ರ |
| ತಂದೆಯ ಹೆಸರು | : | ಕರಬಸನಗೌಡ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಡಮಲ್ಲಿ |

**ದಿನಾಂಕ: 20-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಎಪಿಪಿ ರವರಿಂದ:**

ಆರೋಪಿತರು ನನಗೆ ಪರಿಚಯಸ್ಥರು. ಅವರು ನನಗೆ ಅಣ್ಣ-ತಮ್ಮಂದಿರು ಆಗಬೇಕು. ಚಾಸಾ-1 ನನ್ನ ಅಣ್ಣನ ಮಗ. ಚಾಸಾ-6 ನನ್ನ ಅಣ್ಣ. ಚಾಸಾ-8 ರಿಂದ 12 ನಮ್ಮ ಗ್ರಾಮವದರು. ಈಗ ಸುಮಾರು 30 ವರ್ಷಗಳ ಹಿಂದೆ ನನ್ನ ಅಣ್ಣ ಹೇಮನಗೌಡ ಹನುಮಗೌಡ ಪಾಟೀಲರವರು ಗೌರಮ್ಮ ಪಾಟೀಲರವರಿಗೆ ದತ್ತು ಹೋಗಿದ್ದು ಸದರಿ ದತ್ತು ಕುಟುಂಬದ ಜಮೀನುಗಳಾದ ಬಡಮಲ್ಲಿ ಗ್ರಾಮದ ಸರ್ವೆ ನಂ.40/2 ಮತ್ತು 40/4 ಜಮೀನುಗಳನ್ನು ಹೇಮನಗೌಡ ಪಾಟೀಲರವರೇ ಉಳುಮೆ ಮಾಡುತ್ತಿದ್ದರು. ಸದರಿ ಜಮೀನುಗಳನ್ನು ಉಳುಮೆ ಮಾಡುವುದಕ್ಕೆ ಸಂಬಂಧಿಸಿದಂತೆ ಆರೋಪಿತರು ಹಾಗೂ ಚಾಸಾ-1 ರವರ ಮಧ್ಯೆ ತಂಟೆ ಇದೆ. ಚಾಸಾ-1 ರವರು ಹೇಮನಗೌಡರವರ ಮಗನಾಗಿರುತ್ತಾನೆ.

2. ಹೀಗಾಗಿ ದಿನಾಂಕಃ 26.08.2021 ರಂದು ಬೆಳಿಗ್ಗೆ 11.00 ರ ಸಮಯದಲ್ಲಿ ಹೇಮನಗೌಡ ಹಾಗೂ ಚಾಸಾ-1 ರವರು ಎತ್ತುಗಳ ಮೂಲಕ ಸರ್ವೆ ನಂ. 40/2 ಜಮೀನಿನಲ್ಲಿ ಉಳುಮೆ ಮಾಡಲು ಹೋಗಿದ್ದರು. ಆಗ 1 ರಿಂದ 8 ಜನ ಆರೋಪಿತರು ಸದರಿ ಜಮೀನಿಗೆ ಗುಂಪು ಕಟ್ಟಿಕೊಂಡು ಹೋಗಿ ಚಾಸಾ-1 ರವರಿಗೆ ಹಾಗೂ ಹೇಮನಗೌಡರವರಿಗೆ ಅವಾಚ್ಯಶಬ್ದಗಳಿಂದ ಅಂದರೆ ಬೋಸಡಿ ಮಕ್ಕಳೇ ನಿಮದೇನಿದೆ ಎಂದರು. ಹಾಗೂ ಸದರಿ ಚಾಸಾ-1 ಮತ್ತು ಹೇಮನಗೌಡರವರಿಗೆ ಎಲ್ಲರೂ ಕೂಡಿ ಕೈಯಿಂದ ಹಲ್ಲೇ ಮಾಡಿದರು. ಸದರಿ ಹಲ್ಲೇ ಮಾಡಿದ ವಿಚಾರ ನನಗೆ ಗೊತ್ತಾಗಿ ನಾನು ಹಾಗೂ ಚಾಸಾ6 ರವರ ಸದರಿ ಜಮೀನಿಗೆ ಹೋದೆವು. ಸದರಿ ಎಲ್ಲ ಆರೋಪಿತರು ಸೇರಿ ಚಾಸಾ-1 ಮತ್ತು ಹೇಮನಗೌಡರವರಿಗೆ ಹಲ್ಲೇ ಮಾಡುತ್ತಿದ್ದರು. ಸದರಿ 6 ನೇ ಆರೋಪಿ ನನ್ನ ಹೇಮನಗೌಡನಿಗೆ ಚಪ್ಪಲಿಯಿಂದ ಹೊಡೆದನು. ಆಗ ನಾನು ಬಿಡಿಸಲು ಹೋದಾಗ 3 ಮತ್ತು 7 ನೇ ಆರೋಪಿತರು ನನಗೆ ಹಿಡಿದು ಕೈಯಿಂದ ಮೈ-ಕೈಗೆ ಹೊಡೆದರು. ಚಾಸಾ-6 ರವರು ಸಹ ಬಿಡಿಸಲು ಹೋದಾಗ 3 ನೇ ಆರೋಪಿ ಸಹ ಆತನಿಗೆ ಹಲ್ಲೇ ಮಾಡಿರುತ್ತಾರೆ. ಹಾಗೂ ಸದರಿ ಸ್ಥಳದಲ್ಲಿ ಚಾಸಾ-8 ಮತ್ತು 9 ರವರು ಬಂದು ಜಗಳ ಬಿಡಿಸಿದರು. ಆಗ ಆರೋಪಿತರು ಸದರಿಯವರು ಬಂದು ಜಗಳ ಬಿಡಿಸಿದರು ಎಂದು ಈ ದಿನ ಉಳಿದುಕೊಂಡಿರುತ್ತೀರಿ ಮುಂದೇ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಹೋದರು.

3. ನಂತರ ನಾನು ಹಾಗೂ ಸದರಿ ಹೇಮನಗೌಡ ಜಿಲ್ಲಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ಸದರಿ 1 ರಿಂದ 8 ನೇ ಆರೋಪಿತರು 9 ರಿಂದ 11 ನೇ ಆರೋಪಿತರ ಪ್ರಚೋಧನೆ ಮೇರೆಗೆ ಸದರಿ ದಿನ ನಮಗೆ ಅವಾಚ್ಯ ಶಬ್ದಗಳಿಂದೆ ಬೈದು ಹಲ್ಲೇ ಮಾಡಿರುತ್ತಾರೆ. ಇದಾದನಂತರ ದಿನಾಂಕಃ 29.08.2021 ರಂದು ಬೆಳಿಗ್ಗೆ 06.30 ರ ಸಮಯದಲ್ಲಿ ನನ್ನ ಅಣ್ಣ ಹೇಮನಗೌಡ ಬಡಮಲ್ಲಿ ಗ್ರಾಮದ ಜಮೀನಾದ ಸರ್ವೆ ನಂ. 40/2 ಕ್ಕೆ ನೊಗ ತರಲು ಹೋಗಿದ್ದು ನಂತರ ಆತ ಚಾಸಾ-

1 ರವರಿಗೆ ಕರೆ ಮಾಡಿ ಆತನಿಗೆ ಆರೋಗ್ಯ ಸರಿಯಿಲ್ಲ ಬೇಗನೆ ಸದರಿ ಜಮೀನಿಗೆ ಬರುವಂತೆ ಹೇಳಿದನು. ಆಗ ಚಾಸಾ-1 ರವರು ಸದರಿ ಜಮೀನಿಗೆ ಹೋದಾಗ ಸದರಿ ಹೇಮನಗೌಡನಿಗೆ 1 ನೇ ಆರೋಪಿ ಹಾಗೂ ಆತನ ಕಡೆಯವರು ಹಲ್ಲೇ ಮಾಡಿ ಬಿಟ್ಟು ಹೋಗಿರುತ್ತಾರೆ ಎಂದು ನನ್ನ ಅಣ್ಣ ಚಾಸಾ-1 ರವರಿಗೆ ತಿಳಿಸಿದ. ನಂತರ ಚಾಸಾ-1 ರವರು ಚಾಸಾ-10 ರವರನ್ನು ಸಹ ಸ್ಥಳಕ್ಕೆ ಕರೆಯಿಸಿ ದ್ವಿಚಕ್ರ ವಾಹನದಲ್ಲಿ ಸದರಿ ಹೇಮನಗೌಡರವರನ್ನು ಸದರಿಯವರು ಕರೆದುಕೊಂಡು ಮನೆಗೆ ಬಂದರು. ನಂತರ ಚಾಸಾ-11 ರವರ ಓಮಿನಿಯಲ್ಲಿ ಸದರಿ ಹೇಮನಗೌಡರವರಿಗೆ ಜಿಲ್ಲಾ ಆಸ್ಪತ್ರೆ ಹಾವೇರಿಗೆ ಚಿಕಿತ್ಸೆಗಾಗಿ ದಾಖಲಿಸಿದರು. ಹಾಗೂ ಅದೇದಿನ ಬೆಳಿಗ್ಗೆ 09.15 ರ ಸಮಯದಲ್ಲಿ ಸದರಿ ಹೇಮನಗೌಡ ತೀರಿಕೊಂಡಿರುತ್ತಾರೆ ಎಂದು ಸದರಿ ಆಸ್ಪತ್ರೆಯವರು ತಿಳಿಸಿದರು. ನಂತರ ಘಟನೆಗೆ ಸಂಬಂಧಿಸಿದಂತೆ ಪೋಲಿಸರು ಆರೋಪಿತರ ವಿರುದ್ಧ ದೂರು ದಾಖಲಿಸಿದರು. ಘಟನೆಗೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ನನ್ನ ಅಣ್ಣ ಹೇಮನಗೌಡರವರಿಗೆ ಹಾಗೂ ಚಾಸಾ-6 ಮತ್ತು ನನಗೆ ಹಲ್ಲೇ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ. ನಿಪಿ-18 ಮತ್ತು 19 ರಲ್ಲಿರುವ ಚಪ್ಪಲಿಯಿಂದಲೇ ಸದರಿ ದಿನ ಆರೋಪಿತರು ನನ್ನ ಹೇಮನಗೌಡರವರಿಗೆ ಹಲ್ಲೇ ಮಾಡಿದ್ದರು. ಸದರಿ ಚಪ್ಪಲಿಗಳನ್ನು ಈಗಾಗಲೇ ಎಂ.ಓ 1 ಮತ್ತು 2 ಎಂದು ಗುರುತಿಸಲಾಗಿದೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.